<u>(ಫ್ರಾಸಾ-3) ಪ್ರಮಾಣ ವಚನ ಭೋಧಿಸಿದ ದಿನಾಂಕಃ 31-10-2025</u>
ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

6. ಉಳಿದ ಸೋಡಿಯಂಕಾರ್ಬೋನೆಟ ದ್ರಾವಣವನ್ನು ಎರಡು ಭಾಗ ಮಾಡಿ ಆರೋಪಿಯ ಎರಡು ಕೈಗಳನ್ನು ಪ್ರತ್ಯೇಕವಾಗಿ ಗಾಜಿನ ಬಟ್ಟಲಿನಲ್ಲಿದ್ದ ಸೋಡಿಯಂಕಾರ್ಬೋನೆಟ ದ್ರಾವಣದಲ್ಲಿ ತೊಳೆದರು. ಆಗ ಬಣ್ಣ ರಹಿತವಾಗಿದ್ದ ಎರಡು ಬಟ್ಟಲಿನಲ್ಲಿದ್ದ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ಎರಡು ಬಟ್ಟಲಿನಲ್ಲಿದ್ದ ದ್ರಾವಣಗಳನ್ನು ಎರಡು ಸಮ ಭಾಗಗಳಾನ್ನಾಗಿ ಮಾಡಿ ಅವುಗಳನ್ನು ಪ್ರತ್ಯೇಕವಾಗಿ ನಾಲ್ಕು ಬಾಟಲಿನಲ್ಲಿ ಸಂಗ್ರಿಹಿಸಲಾಯಿತು. ಅವುಗಳನ್ನು ಬಿಳಿ ಬಟ್ಟೆಯಿಂದ ಕಟ್ಟಿ ಜೆ ಬಿ ಎಂದು ಮೊಹರು ಮಾಡಿದರು. ಅವುಗಳ ಬಗ್ಗೆ ವಿವರಣೆ ಬರೆದು ನಾವು ಮತ್ತು ಪಂಚರು ಸಹಿ ಮಾಡಿ, ಅವುಗಳನ್ನು ಗಾಜಿನ ಬಾಟಲಿಗಳ ಮೇಲೆ ವಸ್ತು ಸಂಃ 4, 4(ಎ), 5, 5(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸಿಲ್ ಮಾಡಲಾದ 4 ಬಾಟಲಿಗಳನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈ ಾಗಲೇ ಮು.ಮಾ-8 ರಿಂದ 11 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಗಳನ್ನು ಮು.ಮಾ-8(ಎ) ರಿಂದ 11(ಏ) ಎಂದು ಗುರುತಿಸಲಾಯಿತು.

7. ನಂತರ ಪಿಐ ರವರು ಮಾಳಪ್ಪನನ್ನು ಲಂಚದ ಹಣದ ಬಗ್ಗೆ ವಿಚಾರಿಸಿದಾಗ ಆತ ತನ್ನ ಎಡ ಶರ್ಟಿನ ಜೇಬಿನಲ್ಲಿ ರೂ. 3000 ಇಟ್ಟುಕೊಂಡಿರುವುದಾಗಿ ತಿಳಿಸಿದರು. ನಂತರ ಪಿಐ ರವರು ನೆರಳುಸಾಕ್ಷಿ ಬಸವರಾಜ ರವರಿಗೆ ಸದರಿ ಹಣವನ್ನು ಮಾಳಪ್ಪನ ಜೇಬಿನಿಂದ ತೆಗೆದು ಹಾಜರುಪಡಿಸಲು ಸಾುಚಿಸಿದ್ದು, ಅದರಂತೆ ಚಾಸಾ- 2 ಅದನ್ನು ಅವರು ಜೇಬಿನಿಂದ ತೆಗೆದು ಹಾಜರುಪಡಿಸಿದ್ದು, ನಾನು ಮತ್ತು ಚಾಸಾ-2 ಬಸವರಾಜ ಸದರಿ ನೋಟುಗಳನ್ನು ನೊಟುಗಳ ಸಂಖ್ಯೆ ಮತ್ತು ಮೌಲ್ಯವನ್ನು ವಹಿಸಿಕೊಡುವ ಪಂಚನಾಮೆಯ ಸಮಯದಲ್ಲಿ ನಮೂದಿಸಿಕೊಂಡಿದ್ದ ನೋಟುಗಳೊಂದಿಗೆ ತುಲನೆ ಮಾಡಿ ನೋಡಿದಾಗ ಅದೇ ನೋಟುಗಳು ಇರುತ್ತವೆ ಎಂದು ಖಾತರಿಸಿಪಡಿಸಿಕೊಂಡೆವು. ನಿಪಿ-29 ಸಾಕ್ಷಿಗೆ ತೋರಿಸಿ ತಮ್ಮ ಸಹಿ ಗುರುತಿಸಿದ್ದು ಅದನ್ನು ನಿಪಿ-29(ಡಿ) ಎಂದು ಗುರುತಿಸಲಾಯಿತು.

8. ನಂತರ ಸದರಿ ಲಂಚದ ಹಣದ ನೋಟುಗಳನ್ನು ಒಂದು ಖಾಕಿ ಕವರನಲ್ಲಿ ಹಾಕಿ ಬಾಯಿ ಮುಚ್ಚಿ ಜೆ ಬಿ ಎಂದು ಮೊಹರು ಮಾಡಿದೆವು. ಸದರಿ ನೋಟುಗಳ ವಿವರಣೆ ಬರೆದಿದ್ದ ಬಿಳಿ ಚೀಟಿಯನ್ನು ಕವರ ಮೆಲೆ ಅಂಟಿ ಪಂಚರಾದ ನಾವು ಮತ್ತು ಪಿಐ ಸಹಿ ಮಾಡಿ ವಸ್ತು ಸಂಃ 6 ಎಂದು ಗುರುತಿಸಿದೆವು. ಸದರಿ ಕವರಿನಲ್ಲಿದ್ದ ಹಣವನ್ನು ಈಗಾಗಲೇ ಮುಮಾ- 1 ಎಂದು ಗುರುತಿಸಲ್ಪಟ್ಟಿರುತ್ತದೆ. ಸದರಿ ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ.

9. ಸದರಿ ಸ್ಥಳದಲ್ಲಿ ಸಾರ್ವಜನಿಕರು ಇದ್ದ ಕಾರಣ ಮುಂದಿನ ಪ್ರಕ್ರಿಯೆ ಕೈಗೊಳ್ಳಲು ಅಡಚಣೆ ಆಗುತ್ತದೆ ಎಂದು ಮದ್ಯಾಹ್ನ 3.15 ಕ್ಕೆ ಆರೋಪಿ ಕೆಲಸ ಮಾಡುತ್ತಿದ್ದ ಸುರಪೂರ ತಹಶೀಲ್ದಾರ ಕಚೇರಿಗೆ ಹೋದೆವು. ಪುನಃ ಸಾಕ್ಷಿ 4.15 ಕ್ಕೆ ಹೋದೆವು ಎಂದು ನುಡಿಯುತ್ತಾರೆ. ಆಗ ತಹಶೀಲ್ದಾರ ಮತ್ತು ಸುಪರವೈಸರ್ ರವರು ಮೀಟಿಂಗ ಹೋಗಿರುತ್ತಾರೆ ಎಂದು ತಿಳಿಸಿದರು. ಆ ಕಾರಣಕ್ಕೆ ಪ್ರಭಾರದಲ್ಲಿದ್ದ ಕಚೇರಿಯ ಅದಿಕಾರಿ ಚಾಸಾ-8 ನರೇಶ ರವರಿಗೆ ಆರೋಪಿತರ ದಸ್ತಗಿರಿ ನೋಟಿಸ ನೀಡಿರುತ್ತೇವೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ನಂತರ ಸಂಜೆ 4.45 ಕ್ಕೆ ತಹಶೀಲ್ದಾರ ಕಚೇರಿ ಬಿಟ್ಟು ಸಂಜೆ 6.00 ಯಾದಗಿರಿ ಲೊಕಾಯುಕ್ತ ಕಚೇರಿಗೆ ತಲುಪಿದೆವು.

10. ಆರೋಪಿತ ಮಾಳಪ್ಪನಿಗೆ ಮತ್ತೂಂದು ಶರ್ಟ ವ್ಯವಸ್ತೆ ಮಾಡಿ ಆತ ಧರಿಸಿದ್ದ ಶರ್ಟ ಪಡೆದು ಅದರ ಎಡ ಜೇಬಿನ ಒಳಪದರವನ್ನು ಸೋಡಿಯಂ ಕಾರ್ಬೋನಟ್ ಧ್ರಾವಣದಲ್ಲಿ ಅದ್ದಿದ್ದು ಅದು ತಿಳಿ ಗುಲಾಬಿಬಣ್ಣಕ್ಕೆ ತಿರುಗಿದ್ದು, ಅದನ್ನು ಎರಡು ಗಾಜಿನ ಬಾಟಲಿನಲ್ಲಿ ಹಾಕಿ ಚೀಟಿಗಳ ಮೆಲೆ ಸಹಿ ಪಡೆದು ಅವುಗಳನ್ನು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಜಿ ಬಿ ಎಂದು ಮೊಹರು ಮಾಡಿ 7, 7(ಎ) ಎಂದು ಸಂಖ್ಯೆ ನೀಡಲಾಯಿತು. ಅವುಗಳು ಈಗಾಗಲೇ ಮುಮಾ-12, 13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ಮುಮಾ-12(ಎ) ಮತ್ತು 13(ಎ) ಎಂದು ಗುರುತಿಸಲಾಯಿತು. ಆರೋಪಿಯ ಸದರಿ ಶರ್ಟನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಜಿ ಬಿ ಎಂದು ಮೊಹರು ಮಾಡಿ 8 ಎಂದು ಸಂಖ್ಯೆ ನೀಡಲಾಯಿತು. ಅದು ಈಗಾಗಲೇ ಮುಮಾ-14 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಮುಮಾ-14(ಎ) ಎಂದು ಗುರುತಿಸಲಾಯಿತು.

11. ನಂತರ ಫಿರ್ಯಾದಿದಾರ ಹಣ ಆರೋಪಿಗೆ ಕೊಡುವಾಗ ವೈಸ್ ರರ್ಕಾಡರ ಇದ್ದು ಇಬ್ಬರು ಮಾತನಾಡಿದ್ದು ಸಂಭಾಷಣೆ ಇದ್ದು ಅದನ್ನು ನನಗೆ ಮತ್ತು ಚಾಸಾ- 2 ರವರಿಗೆ ಕೇಳಿಸಿದ್ದು, ಅದನ್ನು ಸಿಡಿ ಮಾಡಿಲಾಯಿತು. ಅದನ್ನು ಒಂದು ಲಕೋಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಜಿ ಬಿ ಎಂದು ಮೊಹರು ಮಾಡಿ 9 ಎಂದು ಸಂಖ್ಯೆ ನೀಡಲಾಯಿತು. ಅದು ಈಗಾಗಲೇ ಮುಮಾ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಮುಮಾ-4(ಎ) ಎಂದು ಗುರುತಿಸಲಾಯಿತು. ಸದರಿ ಸಿಡಿಯಲ್ಲನ ಸಂಬಾಷಣೆಯನ್ನು ಬಿಳಿ ಹಾಳೆಯಲ್ಲಿ ಬರೆದು ನಾನು ಮತ್ತು ಪಂಚ ಸಹಿ ಮಾಡಿದೆವು. ಅದು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿದೆ.

12. ನಂತರ ಪಿಐ ರವರು ಚಾಸಾ-8 ರವರಿಗೆ ಲಂಚದ ಹಣ ಬೇಡಿಕೆ ಇಟ್ಟ ಸಮಯದಲ್ಲಿನ, ಮತ್ತು ಲಂಚದ ಹಣ ಪಡೆದ ಸಮಯದಲ್ಲಿನ, ಸಿಡಿ ಗಳಲ್ಲಿ ಇದ್ದ ಸಂಭಾಷಣೆಯನ್ನು ಕೇಳಿಸಿದ್ದು ಅದರಲ್ಲಿನ ಆರೋಪಿ ಮಾಳಪ್ಪನ ದ್ವನಿಯನ್ನು ಗುರುತಿಸಿರುತ್ತಾರೆ. ಸಾಕ್ಷಿ ಮುಮಾ-5 ಸಿಡಿ ನೋಡಿ ಗುರುತಿಸಿದ್ದು. ಸಾಕ್ಷಿಯ ಸಹಿಯನ್ನು ಮುಮಾ-5(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿ ಲಂಚದ ಹಣಕ್ಕೆ ಬೇಡಿಕೆ ಇಟ್ಟ ದ್ವನಿ ಸಂಬಾಷಣೆಯನ್ನು ಬಿಳಿ ಹಾಳೆಯಲ್ಲಿ ಬರೆದು ನಾನು ಮತ್ತು ಚಾಸಾ-2 ಮತ್ತು ಪಿಐ ರವರು ಸಹಿ ಮಾಡಿರುತ್ತೇವೆ. ಅದನ್ನು ಸಾಕ್ಷಿಗೆ ತೋರಿಸಿ ಸಹಿ ಗುರುತಿಸಿದ್ದು ಅದನ್ನು ನಿಪಿ-32, ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು.

13. ಪಿಐ ರವರು ಆರೋಪಿ ಮಾಳಪ್ಪನಿಗೆ ತನ್ನ ರಕ್ಷಣಾತ್ಮಕ ಕೇಳಿಕೆಯನ್ನು ಬರೆದುಕೊಡಲು ತಿಳಿಸಿದ್ದು, ಆಗ ಆರೋಪಿ ದಿಃ 24.02.2015 ರಂದು ಚಾಸಾ-1 ತನಿಗೆ ರೂ. 2000 ನೀಡಿದ್ದು. ವೈಯಕ್ತಿಕ ದ್ವೇಶದ ಕಾರಣ ತನ್ನ ಮೇಲೆ ಲೊಕಾಯುಕ್ತ ದೂರು ನೀಡಿ ದಿಃ 28.02.2015 ರಂದು ಟ್ರ್ಯಾಪ ಮಾಡಿಸಿದ್ದು ತನ್ನದೇನು ತಪ್ಪಿಲ್ಲ ಎಂದು ಬರೆದು ಸಹಿ ಮಾಡಿ ಕೊಟ್ಟಿರುತ್ತಾರೆ. ಅದನ್ನು ನನಗೆ, ಚಾಸಾ-1 ಮತ್ತು 2 ರವರಿಗೆ ತೋರಿಸಿದ್ದು ನಾವು ಅದನ್ನು ಅಲ್ಲಗಳೆದು ಅದಕ್ಕೆ ಸಹಿ ಮಾಡಿದೆವು. ನಿಪಿ-20 ಸಾಕ್ಷಿಗೆ ತೂೀರಿಸಿ ಸಾಕ್ಷಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿುತು.

14. ನಂತರ ಪಿಐರವರು ಈ ಪ್ರಕರಣದ ಮುಮಾ ಗಳ ಮೇಲೆ ಮೋಹರು ಮಾಡಲು ಬಳಸಿದ ಜೆ.ಬಿ ಅಕ್ಷರದ ಸೀಲನ್ನು ನನಗೆ ನೀಡಿ ಮುಂದೆ ತನಿಖಾ ಕಾಲದಲ್ಲಿ ಅಥವಾ ನ್ಯಾಯಾಲಯದಲ್ಲಿ ಕೇಳಿದಾಗ ಹಾರುಪಡಿಸುವಂತೆ ಸೂಚಿಸಿ ಸ್ವೀಕೃತ ಪಡೆದಿರುತ್ತಾರೆ. ಸಾಕ್ಷಿ ತನ್ನ ಜೇಬಿನಿಂದ ಒಂದು ಜೆ. ಬಿ ಎಂಬ ಅಕ್ಷರದ ಒಂದು ಸೀಲ್ ಹಾಜರುಪಡಿಸಿದ್ದು ಅದನ್ನು ಪರಿಶೀಲಿಸಿ ಮುಮಾ- 15 ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಡತದಲ್ಲಿನ ಸ್ವೀಕೃತಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.33 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.33(ಎ) ಎಂದು ಗುರುತಿಸಲಾಯಿತು.

15. ಈ ಎಲ್ಲಾ ಪ್ರಕ್ರಿಯೆಯ ಸಮಯದಲ್ಲಿ ಪಿಐ ರವರ ಸೂಚನೆಯಂತೆ ಸಿಬ್ಬಂದಿಯವರು ಭಾವ ಚಿತ್ರಗಳನ್ನು ತೆಗೆದು ಛಾಯಗ್ರಹಣ ಮಾಡಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ನಿಪಿ-22 ರಿಂದ 27 ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಗುರುತಿಸಿರುತ್ತಾರೆ. ನಮ್ಮ ಹೇಳಿಕೆಗಳನ್ನು ಸಿಬ್ಬಂದಿ ಒಬ್ಬರು ಬೆರಳಚ್ಚು ಮಾಡಿ ನಮ್ಮ ಸಹಿ ಪಡೆದಿರುತ್ತಾರೆ. ಈ ಬಗ್ಗೆ ಜಪ್ತಿ ಪಂಚನಾಮೆಯನ್ನು ಮಃ 3.15 ರಿಂದ 7.30 ರವರೆಗೆ ಲೋಕಾಯುಕ್ತ ಕಚೇರಿಯಲ್ಲಿ ಮಾಡಿದರು. ಸಾಕ್ಷಿಗೆ ಕಡತದಲ್ಲಿನ ನಿಪಿ-21 ಪಂಚನಾಮೆ ತೋರಿಸಲಾಗಿ ನೋಡಿ ಗುರುತಿಸುತ್ತಾರೆ. ನಿಪಿ-21 ರಲ್ಲಿ ಆರೋಪಿಯ ಸಹಿ ಇರುತ್ತದೆ. ಪಂಚನಾಮೆಯ ಸಮಯದಲ್ಲಿ ಪೋಲೀಸರು ನಿಪಿ-31 ನಕಾಶೆಯನ್ನು ತಯಾರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**16.** ನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆದುಕೊಂಡು ಹೋಗಿದ್ದು ಮರನೆ ದಿನ ಲೊಕಾಯುಕ್ತ ಕಚೇರಿಗೆ ಬರುವಂತೆ ತಿಳಿಸಿರುತ್ತಾರೆ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ,ಶ್ರೀ. ಹೆಚ ಎಂ ಪಿ ವಕೀಲರಿಂದ</u>

17. ನನ್ನ ಮೂಲ ಊರು ಕಲಬುರಗಿ. ನಮ್ಮ ಕಚೇರಿ ಬೆಃ 9.30 ಕ್ಕೆ ಕಾರ್ಯಾರಂಭ ವಾಗುತ್ತದೆ. ನಮ್ಮ ಕಚೇರಿಗೆ ಯಾವುದೇ ಪತ್ರ ಬಂದರೂ ಮತ್ತು ಕಳುಹಿಸಿದರು ಅದನ್ನು ವಹಿಯಲ್ಲಿ ನೊಂದಾಯಿಸಬೇಕು ಎಂದರೆ ಸರಿ. ನನಗೆ ಲೋಕಾಯುಕ್ತ ಕಚೇರಿಗೆ ಹೋಗಲು ನನ್ನ ಮೇಲಾಧಿಕಾರಿಗಳು ಲಿಖಿತ ಪತ್ರ ನೀಡಿಲ್ಲ. ನಾನು ಲಿಖಿಪತ್ರ ಪಡೆದು ಕಚೇರಿಯೇತರ ಕಾರ್ಯಗಳಿಗೆ ಭಾಗ ವಹಿಸಬೇಕು ಎಂದರೆ ಸರಿ. ನಾನು ಏ ಷ್ಟುಬಾರಿ ಕಚೇರಿಯಿಂದ ಹೋದರ ಮೇ ಲಾಧಿಕಾರಿಗಳಿಂದ ಲಿಖಿತ ಅನುಮತಿ ಪಡೆಯ ಬೇಕು ಎಂದು ಸರಿ. ನಾನು ಲೋಕಾಯುಕ್ತ ಕಚೇರಿಗೆ ದಿಃ 28.02.2015 ರಂದು ಮತ್ತು 29.02.2015 ರಂದು ಮಾತ್ರ ಮೊದಲು ಬಾರಿ ಈ ಪ್ರಕರಣದಲ್ಲಿ ಬೇಟಿ ನೀಡಿರುತ್ತೇನೆ. ದ್ವಿಃ 29.02.2015 ರಂದು ನಾನು ಲೋಕಾಯುಕ್ತ ಕಚೇರಿಗೆ ಹೋಗಲು ಲೋಕಾಯುಕ್ತ ಪೂಲೀಸರು ನನಗೆ ಯಾವುದೇ ಪತ್ರ ನೀಡಿರಲಿಲ್ಲ.

18. ಲೋಕಾಯುಕ್ತ ಕಚೇರಿಗೆ ನಾನು ದಿಃ28.02.2015 ರಂದು ಬೆಃ 11.45 ಕ್ಕೆ ಹೋಗಿದ್ದೆ. ಆ ಸಮಯಕ್ಕೆ ಚಾಸಾ-1 ದೂರು ನೀಡಿದ್ದರು. ನಾನು ಆ ದೂರು ಓದಿದ್ದೇನೆ. ಅದರಂತೆ ಬಸವರಾಜ ಸಹ ಓದಿದ್ದಾರೆ. ಲಕ್ಷ್ಮೀ ರವರ ಹೊಲವನ್ನು ಚಾಸಾ-1 ರವರು ಖರೀದಿಸಿದ್ದು ಅದರ ಸರ್ವೆ ಮತ್ತು ನಕಾಶೆ ಮಾಡುವ ವಿಷಯವಾಗಿ ದೂರು ಇತ್ತು. ನಾನು ಈ ಪ್ರಕರಣದಲ್ಲಿ ದೂರುದಾರ ಆರೋಪಿ ಮುಂದೆ ಸಲ್ಲಿದ್ದ ಅರ್ಜಿ ಮತ್ತು ಪೂರಕ ದಾಖಲೆಗಳನ್ನು ದಿಃ 28.02.2015 ಮತ್ತು 29.02.2015 ರಂದು ನೋಡಿಲ್ಲ. ಸಾಕ್ಷಿಗೆ ನಿಡಿ-1 ತೋರಿಸಿ ಗುರುತಿಸಲು ಆಗುವುದಿಲ್ಲ ಅಂತಾ ಹೇಳುತ್ತಾರೆ. ನನಗೆ ಸರ್ವೆ ದಾಖಲೆಗಳ ಬಗ್ಗೆ ಹೇಳಲು ತಿಳಿಯುವುದಿಲ್ಲ.

19. ಮುಮಾ - 4 ಯಾವ ಸಮಯಕ್ಕೆ ಮತ್ತು ಯಾವ ಸ್ಥಳದಲ್ಲಿ ಮಾಡಲಾಗಿದೆ ಎಂದು ಅದರ ಮೇಲೆ ನಮೂದಿಸಿದಿಲ್ಲ ಎಂದರೆ ಸರಿ. ಮುಮಾ - 5 ಯಾವ ಸಮಯಕ್ಕೆ ಮಾಡಲಾಗಿದೆ ಎಂದು ಅದರ ಮೇಲೆ ನಮೂದಿಸಿದಿಲ್ಲ ಎಂದರೆ ಸರಿ.

20. ನಾನು ಈ ಪ್ರಕರಣದ ಮುನ್ನ ಚಾಸಾ-1 ಮತ್ತು ಆರೋಪಿತರ ಧ್ವನಿ ಕೇಳಿಲ್ಲ ಮತ್ತು ವೈಯಕ್ತಿಕವಾಗಿ ಪರಿಚಯ ಇಲ್ಲ. ವೈಸ್ ರಿಕಾರ್ಡರ ಯಾವ ಕಂಪನಿಯದು ಎಂದು ಗೊತ್ತಿಲ್ಲ. ಪಂಚನಾಮೆಯಲ್ಲಿ ಅದು ಯಾವ ಕಂಪನಿಯದು ಎಂದು ಬರೆಸಿಲ್ಲ ಎಂದರೆ ಸರಿ. ಯಾವ ಕಂಪನಿಯ ಮೊಬೈಲ್ ನಿಂದ ಧ್ವನಿ ಸಂಭಾಷಣೆ ಕೇಳಿಸಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಲೋಕಾಯುಕ್ತ ಪೋಲೀಸರು ವೈಸ್ ರಿಕಾರ್ಡರ ಮತ್ತು ಮೊಬೈಲ್ ಜಪ್ತಿಪಡಿಸಿಕೊಂಡಿಲ್ಲ.

**(ಮುಂದುವಾರೆದ ಪಾಟೀಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿಸಿ ಕಾಲವಕಾಶ ನೀಡಿಲಾಯಿತು. )**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.